
ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಹಗಲು ಕಂಡ ಭಾವಿಯಲ್ಲಿ ರಾತ್ರಿ ಬಿದ್ದವನಿಗೆ ನಿಮ್ಮ ಸಲಹೆ?*




ಗುಡ್! ಸ್ವಪ್ರಯತ್ನದಿಂದಲೇ ಮೇಲೆ ಬರಲು ಯತ್ನಿಸುವುದಕ್ಕೆ ಇದೇ ಉತ್ತಮ ಸಮಯ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಸಮುದ್ರದಲ್ಲಿ ಮುತ್ತು ರತ್ನಗಳು ಸಿಗುವಂತೆ ವಿಧಾನಸೌಧದಲ್ಲಿ ಏನು ಸಿಗಬಹುದು ಗುರು?*
ತಿಮಿಂಗಲಗಳು, ಕಡಲ್ಗಳ್ಳರು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಬ್ಯೂಟಿ ಪಾರ್ಲರ್‌ಗಳನ್ನು ಒಮ್ಮೆಲೇ ಬಂದ್ ಮಾಡಿದರೆ ತರುಣಿಯರ ಪರಿಸ್ಥಿತಿ ಏನಾದೀತು?*
ತರುಣರ ಬಳಿ ಸುಳಿಯದೆ ದೂರ-ದರ್ಶನ ಕೇಂದ್ರಗಳಾಗಬೇಕಾದೀತು!

ಕೆ.ಹೊನ್ನಪ್ಪ, ಕ್ಯಾತಸಂದ್ರ
*ಸಿನೆಮಾಗಳಲ್ಲಿ ಸಾಮಾನ್ಯವಾಗಿ ನಾಯಕಿ ನಾಯಕನನ್ನು ನೆನೆಸಿಕೊಂಡಾಗ ನಾಯಿಮರಿಯನ್ನು ಮುದ್ದಿಸುವುದೇಕೆ?*
ಅವನೂ ಅದರಂತೆಯೇ ಬಾಲ ಅಲ್ಲಾಡಿಸಿಕೊಂಡು, ಕುಯ್‌ಗುಡುತ್ತಾ ಇವಳನ್ನು ಹಿಂಬಾಲಿಸುವುದರಿಂದ!

ಕಂಡಕ್ಟರ್ ರಾಜು, ಗುಬ್ಬಿ
*ವಿದ್ಯುತ್ ಸ್ಪರ್ಶಕ್ಕೂ, ಹುಡುಗಿಯ ಸ್ಪರ್ಶಕ್ಕೂ ವ್ಯತ್ಯಾಸವೇನು?*



ಎರಡೂ ಝುಂ ಎನ್ನಿಸಿದರೂ, ಒಂದು ಡೆಡ್ಲಿ, ಇನ್ನೊಂದು ಲವ್ಲಿ!

ಎನ್. ಪ್ರಕಾಶ್, ದೇವನಹಳ್ಳಿ
*ವೇದಾಂತಿಗಳು ನಾನು ಎಂದು ಎಲ್ಲಿಯೂ ಹೇಳಬಾರದು ಎನ್ನುತ್ತಾರೆ; ಆದ್ದರಿಂದ ನಾನು ಎಂಬುದಕ್ಕೆ ಒಂದು ಪರ್ಯಾಯ ಪದ ಸೂಚಿಸಿ ಸಾರ್?*
ಗಡ್ಡ ಬಿಟ್ಟು, ಮೀಸೆ ಬಿಟ್ಟು, ಜುಟ್ಟು ಬಿಟ್ಟು ಎಂದರೆ ಅವೆಲ್ಲಾ ಇಲ್ಲದೇ ಎಂದರ್ಥವೇ? ನಾನು ಎಂಬುದ ಬಿಟ್ಟು... ಎಂದರೆ ನಾನು ಎಂಬುದನ್ನು ಹೊಂದಿ ಎಂದೇ ಅರ್ಥ! ತೀರಾ ಬೇಕೆಂದರೆ ಸ್ವಾಮೀಜಿಗಳಂತೆ ನಾವು ಎಂದುಕೊಳ್ಳಿ.

ಎನ್.ಎಸ್. ಆನಂದ್, ಕತ್ತರಗುಪ್ಪ
*ಹುಡುಗಿ ನಕ್ಕರೆ ಫ್ಯಾಷನ್ ಅನ್ನುವ ಜನ ಹುಡುಗ ನಕ್ಕರೆ ಹುಚ್ಚ ಅನ್ನುವುದೇಕೆ?*
ಆ ನಗೆಗೆ ಮೋಹಕತೆ, ಈ ನಗೆಗೆ ದ್ರೋಹ ಕತೆ ಕಾರಣವಾದುದರಿಂದ!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ಬ್ರಹ್ಮ ಹಣೆಯ ಮೇಲಿನ ಬರಹವನ್ನು ಏಕೆ ಸ್ಪಷ್ಟವಾಗಿ ಬರೆಯಲಿಲ್ಲ?*
ಅದೆಷ್ಟೂಂತ ಸೃಷ್ಟಿ ಮಾಡ್ತೀರ, ಅದೆಷ್ಟೂಂತ ಬರೀತೀರ, ಏನೋ ಒಂದು ಗೀಚಿ ಕಳಿಸಿ ಎಂದಳಂತೆ ಮಡದಿ ಸರಸ್ವತಿ!

ಕೊ.ಸು. ನರಸಿಂಹಮೂರ್ತಿ, ಮೈಸೂರು
*ಸದಾ ನಗುತ್ತಿದ್ದ ಸದಾನಂದಗೌಡರು ಮೊನ್ನೆ ಸಹಕಾರವಿಲ್ಲವೆಂದು ಅತ್ತರಂತೆ...?*
ಆಗಲೂ ಹೆಸರಿಗೆ ಭಂಗ ಬರಲಿಲ್ಲ; sadಆನಂದಗೌಡರಾದರಷ್ಟೆ!

ಲಕ್ಷ್ಮಿ ಎಸ್. ಮೆಳ್ಳಿಗೇರಿ, ಜತ್ತಿ
*ಹೆಂಡತಿಗೆ ಗಂಡ ತಾಳಿ ಕಟ್ಟಿದ್ದರೂ, ಗಂಡ ಅವಳ ಹತೋಟಿಯಲ್ಲೇ ಇರುತ್ತಾನೆ, ಏಕೆ?*
ಹೆಂಡಕ್ಕೆ ಹಣ ಇವನೇ ತೆತ್ತರೂ ಹೆಂಡ ಆಡಿಸಿದಂತೆಯೇ ಆಡುವುದಿಲ್ಲವೇ... ಗಂಡು ಎಂದಿಗೂ ನಶೆಯ ಗುಲಾಮ!

ಡಿ.ಕೆ. ರಾಜ್, ಗದಗ
*ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ಯಾಕೆ?*
ಅದು ದಾಸರ ಟೇಸ್ಟ್! ನಿಮಗೆ ಯಾವ ಸಕ್ಕರೆ ಅಕ್ಕರೆಯೋ ಅದೇ ಬೆರೆಸಿಕೊಳ್ಳಿ, ಬ್ರೌನ್ ಷುಗರ್ ಒಂದನ್ನು ಬಿಟ್ಟು!

ಜಾಕೋಬ್ ಡಿಸೋಜ, ಕುರುವಳ್ಳಿ
*ನಿಮ್ಮಿಂದ ನಾವು ನಿರೀಕ್ಷಿಸಿದ ಉತ್ತರ ದೊರೆಯದಿದ್ದರೆ?*
ಕೊಟ್ಟ ಉತ್ತರ ಅದಕ್ಕಿಂತಲೂ ಗುಡ್ ಆದರೆ ನಾ ಪಾಸ್, ಇಲ್ಲದಿದ್ದರೆ ನಾಪಾಸ್!

ಸುಮತಿ ಕೃಷ್ಣರಾವ್, ತುಮಕೂರು
*ಸಂಸ್ಕೃತದ ಗಂಧ, ಮಂತ್ರಗಳ ಅರಿವು ಇಲ್ಲದವರೂ ಮಕ್ಕಳಿಗೆ, ಮನೆಗೆ ಸಂಸ್ಕೃತಮೂಲದ ಹೆಸರನ್ನೇ ಇಡುವುದೇಕೆ?*
ಸು-ಸಂಸ್ಕೃತರು ಎಂಬ ನಂಬಿಕೆ ಮೂಡಿಸಲು!

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು
*ಕಪ್ಪು ಹಣದಲ್ಲೂ ಸಹ ಸತ್ಯಮೇವ ಜಯತೇ ಎಂದು ಬರೆದಿರುತ್ತಾರಲ್ಲಾ...?*
ಸರಿಯೇ! ಸತ್- ನಿಜಕ್ಕೂ, ಯಮೇವ ಜಯತೇ ಯಮನೇ ಗೆಲ್ಲುತ್ತಾನೆ, ಅರ್ಥಾತ್ ಯಮನ ಬಣ್ಣದ (ಕಪ್ಪು) ಹಣವೇ ಗೆಲ್ಲುತ್ತದೆ ಎಂಬುದೇ ಇದರ ಗೂಢಾರ್ಥ!

ಎನ್. ಮಹೇಶ್ ನಯನ್, ಶಿಡ್ಲಘಟ್ಟ
*ಪಾರ್ಕುದೀಪದ ಕೆಳಗೆ ಪ್ರೀತಿ, ಕೆಂಪು ದೀಪದ ಕೆಳಗೆ?*
ಭೀತಿ ಎಂದು ನೀವೇ ಹೇಳಿದಿರಲ್ಲಾ...!

ಶಿವಕುಮಾರ ಪತ್ರಿಮಠ, ಯಾದಗಿರಿ
*ವಪ್ರಕ್ಕಿಂತ ಕಠೋರವಾದುದು ಯಾವುದು?*
ಟಿವಿ ಮತ್ತು ಎಫ್‌ಎಂ ರೇಡಿಯೋ ಅನೌನ್ಸರ್‌ಗಳ ಕನ್ನಡ!

ಮಹಾವೀರ ಕಾಸರ, ಶಿವಮೊಗ್ಗ
*ಚಿಲ್ಲರೆ ಜನ ಎಂದರೆ ಯಾರು?*
ಕಂಡಕ್ಟರ್‌ಗಳು!

ವಿಜಯ್ ನರಹರಿ, ಆಸುಂಡಿ
*ಪ್ರೀತಿಯಲ್ಲೂ ಎಲ್ ಬೋರ್ಡ್ ಇರುತ್ತಾ ಗುರು?*




ಎಲ್ ಓ ಶುರುವಾಗಿ (ಐ ಬದಲು) we ಆಗಿ, ಈ ಎಂದು ಹಲ್ಲುಕಿರಿಯುತ್ತಾ ಬಾಳುವುದೇ ಲವ್! ಎಲ್ ಅಷ್ಟೇ ಅಲ್ಲ, ಎಲ್ ಎಲ್‌ಊ ಇರುತ್ತೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಕೆಲವು ವೇಳೆ ಎಷ್ಟೇ ದುಡಿದರೂ ಕೈಗೆ ಹತ್ತದಿರಲು ಕಾರಣ...?*
ಕೈಬೆರಳುಗಳು ವಾಸ್ತು ಪ್ರಕಾರ ಕೂಡಿಕೊಳ್ಳದೆ, ಬೆರಳ ಸಂದುಗಳಿಂದ ಹಣ ಸೋರಿಹೋಗುತ್ತದಂತೆ!

ಅನಿತಾ ವಿ. ಜೋಶಿ, ಧಾರವಾಡ
*ರಾಮನ ಹಿಂದೆ ಸೀತೆ ವನವಾಸಕ್ಕೆ ಹೋದಂತೆ ಲಕ್ಷ್ಮಣನ ಹೆಂಡತಿ ಊರ್ಮಿಳೆ ಹೋಗದಿರಲು ಕಾರಣ?*
ಆಗಿನ ರಥವೂ ಈಗಿನ ಆಟೋದಂತೆ ಮೂರೇ ಜನರನ್ನು ಹಿಡಿಯುತ್ತಿತ್ತಂತೆ!

■ ರಾಮ್